ಸಿ.ಮಿಸ್.ನಂ. **37/2019**

ಆರ್.ಡಬ್ಲ್ಯೂ: **01**

**<u>ದಿನಾಂಕಃ 18-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಬಿ.ಆರ್.ಎ ವಕೀಲರಿಂದಃ</u>**

**1** ಸ.ನಂಬರ 28 ದಾವೆ ಮಾಡುವ ಸಮಯದಲ್ಲಿ ನನ್ನ ಹೆಸರಲ್ಲಿತ್ತು, ಅದೇ ರೀತಿ ಎಲ್ಲಾ ದಾಖಲೆಗಳಲ್ಲಿಯೂ ನನ್ನ ಹೆಸರೇ ಇತ್ತು. ಅರ್ಜಿದಾರರು ಸ.ನಂಬರ 28 ರಲ್ಲಿ ತಮ್ಮ ಹೆಸರನ್ನು ಯಾವಾಗ ಕೂರಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ನಾವು ದಾವೆಯನ್ನು ಮಾಡಿದ್ದೇವೆ. ದಾವೆ ಹಾಕುವ ಸಮಯದಲ್ಲಿ ಅರ್ಜಿದಾರರ ಊರಿನ ಹೆಸರು ಶರಣ ಸೋಮನಾಳ ತಾಃ ಬ.ಬಾಗೇವಾಡಿ ಎಂದು ನಮೂದಿಸಲಾಗಿತ್ತು. ಸದರಿ ಅರ್ಜಿದಾರರು ಶರಣ ಸೋಮನಾಳದ ನಿವಾಸಿಗಳಲ್ಲ ಎಂದರೆ ಸರಿಯಲ್ಲ.

2. ಅರ್ಜಿದಾರರಿಗೆ ದಾವಾ ಸಮನ್ಸಗಳು ನ್ಯಾಯಾಲಯದಿಂದ ಹೋಗಿದ್ದವು. ಆದರೆ ನ್ಯಾಯಾಲಯದಿಂದ ಹೋದ ಬೇಲಿಫರವರು ಅರ್ಜಿದಾರರು ಶರಣ ಸೋಮನಾಳದ ನಿವಾಸಿಗಳಲ್ಲ ಎಂದು ದಾವೆಯ ಸಮನ್ಸನ್ನು ಹಿಂತಿರಿಗಿಸಿದ್ದಾರೆ ಎಂದರೆ ಸರಿಯಲ್ಲ. ಬೇಲಿಫರವರು ಬರೆದಿರುವ ವರದಿಯನ್ನು ನಾನು ನೋಡಿದ್ದೇನೆ. ಅದರಲ್ಲಿ ಸಮನ್ಸ ಜಾರಿಯಾಗಿದೆ ಎಂದು ಬರೆಯಲಾಗಿದೆ. ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ಅಸಲು ದಾವಾ 135/2018 ರ ಸಮನ್ಸಗಳು ಅರ್ಜಿದಾರರಿಗೆ ಬೇಲಿಫ್ ಮುಖಾಂತರ ಜಾರಿಯೇ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಅರ್ಜಿದಾರರ ತಪ್ಪು ವಿಳಾಸವನ್ನು ನೀಡಿ, ಸಮನ್ಸ ಜಾರಿಯಾಗದೇಯಿದ್ದರೂ ಜಾರಿಯಾಗಿದೆ ಎಂದು ತಪ್ಪು ಮಾಹಿತಿ ನೀಡಿ, ಸದರಿ ದಾವೆಯನ್ನು ಡಿಕ್ರಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಸದರಿ ಡಿಕ್ರಿಯ ಆಧಾರದ ಮೇಲೆ ತಾಳೀಕೋಟೆ ತಹಶೀಲ್ದಾರರಿಗೆ ನಾನು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

**4.** ಸದರಿ ಅರ್ಜಿಯಲ್ಲಿ ನಾನು ಈ ಅರ್ಜಿದಾರರ ವಿಳಾಸವನ್ನು ಶರಣ ಸೋಮನಾಳ ಗ್ರಾಮ ತಾಳೀಕೋಟೆ ಎಂದು ನಮೂದಿಸಿದ್ದೇನೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನಿಪಿ-4 ರಲ್ಲಿ ಅರ್ಜಿದಾರರ ವಿಳಾಸವನ್ನು ಹೂವಿನ ಹಿಪ್ಪರಗಿ ಗ್ರಾಮ ಬ.ಬಾಗೇವಾಡಿ ತಾಲ್ಲೂಕು ಎಂದು ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ತಾಳೀಕೋಟೆ ತಹಶೀಲ್ದಾರರು ಮಾಡಿದ ಆದೇಶ, ಅದರಲ್ಲಿ ನಮೂದಿಸಿದ ವಿಳಾಸವನ್ನು ನಾನು ನೀಡಿಲ್ಲ. ನಾನು ತಾಳೀಕೋಟೆ ತಹಶೀಲ್ದಾರರರಿಗೆ ಅರ್ಜಿ ನೀಡುವ ಮುನ್ನ ಪರಮಪ್ಪ ಚೌದರಿರವರ ವಿಳಾಸವನ್ನು ಬರೆದು ನೀಡಿರುತ್ತೇನೆ. ನಿಪಿ-4 ರಲ್ಲಿ ನಮೂದಿಸಿದ ವಿಳಾಸವನ್ನು ನೋಡಿಲ್ಲ.

ಸಿ.ಮಿಸ್.ನಂ. **37/2019**
ಆರ್.ಡಬ್ಲ್ಯೂ: **01**

**5.** ನಾನು ಈ ಅರ್ಜಿಯಲ್ಲಿ ಸಲ್ಲಿಸಿದ ಎಲ್ಲಾ ತಕರಾರುಗಳು ಸುಳ್ಳು ಎಂದರೆ ಸರಿಯಲ್ಲ. ಬೇಲಿಫರನ್ನು ಹೊರತುಪಡಿಸಿ ಅಸಲು ದಾವಾ ನಂಬರ 135/2018 ರಲ್ಲಿ ನಾನು ನ್ಯಾಯಾಲಯದ ಮೂಲಕವೇ ಸಮನ್ಸ ನೀಡಿರುತ್ತೇನೆ. ಬೇಲಿಫರು ನನ್ನ ಸಮಕ್ಷಮ ಸಮನ್ಸ ಜಾರಿಮಾಡಿದ್ದರೂ ಅರ್ಜಿದಾರರಿಗೆ ಪೋಸ್ಟ ಮುಖಾಂತರ ನಾನು ಸಮನ್ಸಗಳನ್ನು ನೀಡಲು ಕಾರಣ ಎಂದರೆ ಸಾಕ್ಷಿಯು ಸಮನ್ಸಗಳು ಜಾರಿಯಾಗದ ಕಾರಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಮನ್ಸಗಳು ಪೋಸ್ಟ ಮುಖಾಂತರ ಜಾರಿಯಾಗದೇ, ನಾನೇ ಪೋಸ್ಟ ಮ್ಯಾನ್ ಜೊತೆ ಶಾಮೀಲಾಗಿ, ಸಮನ್ಸನ್ನು ಅರ್ಜಿದಾರರು ತಿರಸ್ಕರಿಸಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,**
**ಬಸವನ ಬಾಗೇವಾಡಿ**